154 ಶ್ರೀ ನಿ-72 = (119) 4KA 3008

**ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಡಿ.ಎಸ್.ಅರುಣ್ ರವರ ನಿಯರು 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರ ಉತ್ತರ.**

**ಪ್ರಶ್ನೆ**: 2022-23ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎಲ್ಲಾ ಲೆಕ್ಕ ಶೀರ್ಷಿಕೆಗಳಿಗೆ ಹಂಚಿಕೆಯಾದ ಹಣದಲ್ಲಿ ಬಳಕೆಯಾಗದೆ ಉಳಿದ ಅನುದಾನವನ್ನು ಸಂಚಿತ ನಿಧಿಗೆ ವರ್ಗಾವಣೆಗೊಳಿಸದೆ ಅಮಾನತ್ತು ಖಾತೆಯಲ್ಲಿ ಉಳಿಸಿರುವ ವಿಚಾರದ ಬಗ್ಗೆ ನಿಯಮ-72ರ ಅಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**ಉತ್ತರ**

1. 2022-23ನೇ ಆರ್ಥಿಕ ವರ್ಷದಲ್ಲಿ ಲೆಕ್ಕ ಶೀರ್ಷಿಕೆವಾರು ಖರ್ಚಾಗದೇ ಉಳಿದ ಅನುದಾನವನ್ನು ಆಯಾ ಇಲಾಖೆಗಳು ಅಧ್ಯರ್ಪಣೆ ಮಾಡಲಿದ್ದು, ಅಧ್ಯರ್ಪಣೆ ಮಾಡದೇ ಉಳಿದಿರುವ ಅನುದಾನವು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 1(15) ಹಾಗೂ ಅನುಚ್ಛೇಧ 305 ರಂತೆ ಆರ್ಥಿಕ ವರ್ಷಾಂತ್ಯಕ್ಕೆ ವ್ಯಪಗತವಾಗುವುದರಿಂದ ಆ ಮೊತ್ತವನ್ನು ಅಮಾನತ್ತು ಶೀರ್ಷಿಕೆಗೆ/ಸಂಚಿತ ನಿಧಿಗೆ ವರ್ಗಾಯಿಸಲಾಗುವುದಿಲ್ಲ.

2. 2022-23 ನೇ ಆರ್ಥಿಕ ವರ್ಷದಲ್ಲಿ ಸಂದಾಯ ಮಾಡಲಾದ ಮೊತ್ತಗಳಲ್ಲಿ ವಿಫಲವಾದ ಇ-ಪಾವತಿಗಳ ಮೊತ್ತವನ್ನು ಖಜಾನೆವಾರು ಅಮಾನತ್ತು ಲೆಕ್ಕ ಶೀರ್ಷಿಕೆ 8658 ಗೆ ವರ್ಗಾವಣೆಯಾಗಿದ್ದು, ಅದರ ಒಟ್ಟು ಮೊತ್ತವು ರೂ.596,13,36,157 ಆಗಿರುತ್ತದೆ. (ಅನುಬಂಧ-1).

3. 2022-23 ನೇ ಆರ್ಥಿಕ ವರ್ಷದಲ್ಲಿ ವಿಫಲವಾದ ಇ-ಪಾವತಿಗಳ ಒಟ್ಟು ಮೊತ್ತದಲ್ಲಿ 2023-24 ರಲ್ಲಿ ಈವರೆಗೆ ರೂ.574,56,82,743 ಗಳನ್ನು ಸಂಬಂಧಿಸಿದ ಡಿಡಿಓ ರವರಿಂದ ಅಮಾನತ್ತು ಲೆಕ್ಕ ಶೀರ್ಷಿಕೆಯಿಂದ ಸೆಳದು ಸರಿಯಾದ ಸ್ವೀಕರ್ತದಾರರಿಗೆ (Recipient) ಸಂದಾಯ ಮಾಡಲಾಗಿದೆ.

4. ಸರ್ಕಾರದ ಆದೇಶ ಸಂಖ್ಯೆ: ಆಇ 25 ಟಿಎಆರ್ 2020, ದಿನಾಂಕ:21.09.2020 ರಲ್ಲಿ "ಒಂದು ವರ್ಷ ಮೀರಿದ ವಿಫಲ ಇ-ಪಾವತಿಗಳಿಗೆ ಖಜಾನಾಧಿಕಾರಿಗಳು, ಲೆಕ್ಕ ಬದಲಾವಣೆ ಪತ್ರ ತಯಾರಿಸಿ ಮಹಾಲೇಖಪಾಲರಿಗೆ ಸಲ್ಲಿಸಿ, ಮಹಾಲೇಖಪಾಲರಿಂದ ಲೆಕ್ಕ ಬದಲಾವಣೆ (Alteration memo) ಅನುಮೋದನೆ ಪಡೆದ ನಂತರ ಕೈಮುಗಳು ಯಾವ ಲೆಕ್ಕ ಶೀರ್ಷಿಕೆಯಿಂದ ಭರಿಸಲಾಗಿದೆಯೋ ಆ ಪ್ರಧಾನ ಲೆಕ್ಕ ಶೀರ್ಷಿಕೆ 001-911-0-02-ROP of earlier Year" ರಡಿಗೆ ಜಮೆ ಮಾಡಿ ಲೆಕ್ಕ ಶೀರ್ಷಿಕೆ '8658' ಅಮಾನತ್ತು ಲೆಕ್ಕ ಶೀರ್ಷಿಕೆಗೆ ಖರ್ಚು ಹಾಕುವುದು" ಎಂಬ ಸೂಚನೆಗಳಿರುತ್ತವೆ. ಸದರಿ ಸೂಚನೆಗಳಂತೆ ಸಂದಾಯ ಮಾಡದೇ ಅಮಾನತ್ತು ಲೆಕ್ಕ ಶೀರ್ಷಿಕೆಯಲ್ಲೇ ಉಳಿದ ಹಾಗೂ ಒಂದು ವರ್ಷಕ್ಕೂ ಮೀರಿ ಸೆಳೆಯದೇ ಇರುವ ರೂ.21,56,53,414/- ಗಳ ಮೊತ್ತಕ್ಕೆ ಲೆಕ್ಕ ಬದಲಾವಣೆ ಪತ್ರಗಳನ್ನು ಆಯಾ ಜಿಲ್ಲಾ ಖಜಾನೆಗಳಿಂದ ಮಹಾಲೇಖಪಾಲರಿಗೆ ಸಲ್ಲಿಸಲಾಗುತ್ತಿದೆ.

5. ಖಜಾನೆ-2 ರ ಡಾಟಾಬೇಸ್ ನಂತೆ ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ನಿಧಿ ಖಾತೆ-2 ರಲ್ಲಿನ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಖರ್ಚಾಗದೇ ಉಳಿದ ಮೊತ್ತವು ರೂ.459,04,85,254/- ಗಳು ಮತ್ತು ತಾಲ್ಲೂಕು ಪಂಚಾಯತ್ ಲೆಕ್ಕ ಶೀರ್ಷಿಕೆಗಳಲ್ಲಿ ಸಂಬಂಧಿಸಿದಂತೆ ನಿಧಿ ಖಾತೆ-2 ರಲ್ಲಿನ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಖರ್ಚಾಗದೇ ಉಳಿದ ಮೊತ್ತವು ರೂ.1494,12,40,819/- ಗಳು ಇರುತ್ತದೆ ( ಅನುಬಂಧ-2)

6. ಸರ್ಕಾರದ ಆದೇಶ ಸಂಖ್ಯೆ: FD 437 EXP-6/2016 ದಿನಾಂಕ:22.12.2016 ರಲ್ಲಿನ ಸೂಚನೆಗಳನುಸಾರ ಕೆಳಕಂಡಂತೆ ಕ್ರಮವನ್ನು ಆರ್ಥಿಕ ಇಲಾಖೆಯು ತೆಗೆದುಕೊಳ್ಳುತ್ತದೆ.

"Finance Department will take action to adjust this unspent amount in the budget of the year next to the immediately succeeding year. For example, the unspent amount of the year 2014-15 will be adjusted in the year 2016-17, the unspent amount of 2015-16 year will be adjusted in the year 2017-18 and so on. This adjustment will be done by providing a deduct entry operating the Minor Head 911 under the respective Major Head to the extent of unspent amount under it. The same will be operationalized through issue of a Government order by the Finance Department"

ಸಂಖ್ಯೆ:ಆಇ 470 ಆನಿ 2024

(ಸಿದ್ದರಾಮಯ್ಯ)
ಮಾನ್ಯ ಮುಖ್ಯಮಂತ್ರಿಗಳು